# ವಯಸ್ಸು ಮೀರಿದ ಹೊತ್ತು: ಗರ್ಭದಾರಣೆಗೆ ಕುತ್ತು

ವೃತ್ತಿ ಬದುಕಿನಲ್ಲಿ ಒಂದೊಂದೇ ಸಾಧನೆಗೈಯ್ಯುವ ಉತ್ಸಾಹದಲ್ಲಿರುವ ನವೀನ್‌ಗೆ 36 ವರ್ಷ ದಾಟುತ್ತಿದ್ದರೂ ಮದುವೆಯಾಗುವ ಮನಸಿಲ್ಲ. ಇನ್ನೂ ತನ್ನ ವ್ಯಾಪಾರ ವಹಿವಾಟಿನಲ್ಲಿ ಮುನ್ನುಗ್ಗಬೇಕು, ತನ್ನ ವೃತ್ತಿಯಲ್ಲಿ ಉನ್ನತಿ ಪಡೆಯಬೇಕು ಎಂಬ ಆಶಯ. ಹೀಗಾಗಿ ಮದುವೆ ವಿಷಯ ಬಂದಾಗ ತಂದೆ ತಾಯಿಯ ಮಾತನ್ನೂ ಆತ ಕೇಳುವ ಮನಸ್ಥಿತಿಯಲ್ಲಿಲ್ಲ.

ಮದುವೆ ಮುಂದೆ ಹಾಕಲು ಇಂದಿನ ಪೀಳಿಗೆಯ ಯುವಕ ಯುವತಿಯರಿಗೆ ಕಾರಣಗಳು ನೂರಾರು. ಮುಖ್ಯವಾಗಿ, ಸ್ಪರ್ಧಾತ್ಮಕ ಜಗತ್ತಿನಲ್ಲಿ ಮುಂದೆ ಬರಬೇಕು, ಆರ್ಥಿಕವಾಗಿ ಸಧೃಢವಾಗಬೇಕು, ಸ್ವಂತ ಉದ್ಯೋಗ ಪ್ರಾರಂಭಿಸಬೇಕು ಎಂಬ ಕಾರಣವೊಡ್ಡಿ ಮದುವೆಯನ್ನು ಮುಂದೆ ಹಾಕುವುದು ಸಾಮಾನ್ಯವಾಗಿದೆ. ಇದಲ್ಲದೇ, ಪರಸ್ಪರ ಅರ್ಥ ಮಾಡಿಕೊಳ್ಳುವ, ಗೌರವಿಸುವ, ವೃತ್ತಿಯನ್ನು ಅರ್ಥೈಸಿಕೊಳ್ಳುವ ಸಂಗಾತಿ ಬೇಕು ಎನ್ನುವ ಬೇಡಿಕೆಯೊಡ್ಡಿ ಅಂಥ ಸಂಗಾತಿ ಸಿಗುವವರೆಗೂ ಕಾಯುವಿಕೆಯ ತಂತ್ರವನ್ನು ಉಪಯೋಗಿಸುವವರಿಗೇನೂ ಕಡಿಮೆಯಿಲ್ಲ. ಇನ್ನು, ಪ್ರೀತಿಸಿ ಮದುವೆಯಾಗುವವರು ತಮ್ಮ ಕಾಲ ಮೇಲೆ ತಾವು ನಿಂತು ಒಂದು ಹಂತಕ್ಕೆ ಬಂದು ನಿಲ್ಲುವವರೆಗೂ ಮದುವೆ ಬೇಡ ಎಂಬ ಒಪ್ಪಂದ ಮಾಡಿಕೊಳ್ಳುವುದುಂಟು.

ಆದರೆ ಸರಿಯಾದ ವಯಸ್ಸಿಗೆ ಮದುವೆಯಾಗದಿದ್ದರೆ ಮುಂದೆ ದಂಪತಿ ಯಾವ ಬಗೆಯ ಸಮಸ್ಯೆಗಳನ್ನು ಎದುರಿಸಬೇಕಾಗಬಹುದು ಎಂಬುದನ್ನು ಸೂಕ್ಷ್ಮವಾಗಿ ಗಮನಿಸೋಣ.

ಪುರುಷರಿಗೆ ವಯಸ್ಸಾಗುತ್ತ ಸಾಗಿದಂತೆ ಲೈಂಗಿಕ ಆಸೆ ಕಡಿಮೆಯಾಗುತ್ತದೆ (ಡಿಕ್ರೀಸ್ ಇನ್ ಲಿಬಿಡೊ). ನಪುಂಸಕತೆ ಮತ್ತು ಲೈಂಗಿಕ ಚಟುವಟಿಕೆಗಳಲ್ಲಿ ನಿರಾಸಕ್ತಿಯ ಪುರುಷರಲ್ಲಿನ ಬಂಜೆತನದ ಪ್ರಧಾನ ಅಂಶಗಳು. ಮಹಿಳೆಯರಲ್ಲಿ ಸ್ತ್ರೀ ಅಂಡಾಣುವಿನ ಕೊರತೆ ಅಥವಾ ತೊಂದರೆ ಬಂಜೆತನಕ್ಕೆ ಕಾರಣವಾಗುವ ಮುಖ್ಯ ಅಂಶ.



ಪುರುಷರಲ್ಲಿ ವಯಸ್ಸಾಗುತ್ತಿದ್ದಂತೆ ವಂಶಾವಳಿಯ ಮೇಲೆ ಆಗುವ ಕೆಟ್ಟ ಪರಿಣಾಮಗಳ ಬಗ್ಗೆ ಅನೇಕ ಅಧ್ಯಯನಗಳಾಗಿವೆ. ಅಂದರೆ, ತಂದೆಗೆ ವಯಸ್ಸಾಗುತ್ತಿದ್ದಂತೇ ಹುಟ್ಟುವ ಮಗುವಿಗೆ ಮುಂದೆ ಮಾರ್ಫನ್ ಸಿಂಡ್ರೋಮ್, ಪಾಲಿಫಾರ್ಮೇಶನ್ ಇನ್ ಲಾರ್ಜ್ ಬಾವೆಲ್ ಮುಂತಾದ ಸಿಂಡ್ರೋಮ್‌ಗಳು ಕಾಣಿಸಿಕೊಳ್ಳಬಹುದು. ವಿಷಯವನ್ನು ಆಳವಾಗಿ ನೋಡುವುದಾದರೆ, ತಂದೆಯಾಗುವ ಪ್ರಕ್ರಿಯೆ0ಯಲ್ಲಿ ವಯಸ್ಸಾದಂತೆ ಹುಟ್ಟುವ ಮಕ್ಕಳಲ್ಲಿ ಇಂತಹ ರೋಗ ಲಕ್ಷಣಗಳು ಕಾಣಿಸಿಕೊಳ್ಳುವ ಸಾಧ್ಯತೆ ಹೆಚ್ಚಿರುತ್ತದೆ. ಅಧ್ಯಯನದ ಪ್ರಕಾರ 30–34 ವಯಸ್ಸಿನ ಅವಧಿಯಲ್ಲಿ ತಂದೆಯಾಗುವವರ ಮಕ್ಕಳಲ್ಲಿ 1000ಕ್ಕೆ ಒಂದು ಮಗುವಿಗೆ, 40–45 ವಯಸ್ಸಿನಲ್ಲಿ ತಂದೆಯಾದರೆ ಅಂಥವರಲ್ಲಿ 1000ಕ್ಕೆ 4 ಅಥವಾ 5 ಮಕ್ಕಳಿಗೆ ಹಾಗೂ 45 ವಯಸ್ಸಿನ ನಂತರ ತಂದೆಯಾದರೆ 1000ಕ್ಕೆ 37 ಮಕ್ಕಳಿಗೆ ಇಂತಹ ಸಮಸ್ಯೆಗಳು ಕಾಣಿಸಿಕೊಳ್ಳಬಹುದು!

ಮಕ್ಕಳಲ್ಲಿ ಅನುವಂಶೀಯವಾಗಿ ಕಾಣಿಸಿಕೊಳ್ಳುವ ಅನೇಕ ತೊಂದರೆಗಳಿಗೆ ತಂದೆಯಾಗುವಾಗಿನ ವಯಸ್ಸು 40 ದಾಟಿರುವುದೇ ಕಾರಣ; ಶೇಕಡಾ 33ರಷ್ಟು ಮಕ್ಕಳಿಗೆ ಮೇಲ್ಕಾಣಿಸಿದ ತೊಂದರೆಗಳು ಹೀಗಾದಾಗ ಕಾಣಿಸಿಕೊಳ್ಳುತ್ತವೆ ಎಂದು ಫ್ರೈಡ್‌ಮನ್ ತಮ್ಮ ಲೇಖನವೊಂದರಲ್ಲಿ ಹೇಳುತ್ತಾರೆ. ಜೊತೆಗೆ ಮಗುವಿನ ಲೈಂಗಿಕ ಸಾಮರ್ಥ್ಯ ಹಾಗೂ ಹೆಣ್ಣು ಮತ್ತು ಗಂಡಿನ ಅನುಪಾತದ ಮೇಲೂ ತಂದೆಯಾಗುವಾಗಿನ ವಯಸ್ಸು ಪರಿಣಾಮ ಬೀರುತ್ತದೆ.

ಮಹಿಳೆಯರಲ್ಲಿ 25 ವರ್ಷ ವಯಸ್ಸಿನ ನಂತರ ಉತ್ಪತ್ತಿಯಾದ ಅಂಡಾಣುವಿನ ಗುಣಮಟ್ಟ ಕಡಿಮೆಯಾಗುತ್ತ ಬರುತ್ತದೆ. ಗರ್ಭದಲ್ಲಿನ ಭ್ರೂಣದ ಮೊದಲ ಹಂತವು ಋತುಚಕ್ರದಲ್ಲಿ ನಷ್ಟವಾಗುವ ಪ್ರಮಾಣ ಹೆಚ್ಚುತ್ತದೆ. ಇದೂ ಒಂದು ರೀತಿಯಲ್ಲಿ ಗರ್ಭಪತವೇ ಆಗಿರುತ್ತದೆ. ಋತುಮತಿಯಾದ ಸಂದರ್ಭದಲ್ಲಿ ರಕ್ತಸ್ರಾವದ ಜೊತೆಗೆ ಈ ಬಗೆಯ ಗರ್ಭಪಾತ ಸಂಭವಿಸಿರುತ್ತದೆ. ಸಾಮಾನ್ಯವಾಗಿ ಋತುಚಕ್ರದ 17–18ನೇ ದಿನ ಈ ಪ್ರಕ್ರಿಯೆ ಸಂಭವಿಸಿರುತ್ತದೆ. ಮಹಿಳೆಯರ ಅರಿವಿಗೇ ಬಾರದಂತೆ ಇದು ನಡೆಯುತ್ತದೆ. ಉತ್ಪತ್ತಿಯಾದ ಭ್ರೂಣ ಗರ್ಭಪಾತವಾಗುವ ಅಪಾಯವು ಕಿರಿ ವಯಸ್ಸಿನ ಮಹಿಳೆಯರಲ್ಲಿ ಶೇಕಡಾ 24ರಷ್ಟು ಮತ್ತು 35 ವರ್ಷ ದಾಟಿದ ಮಹಿಳೆಯರಲ್ಲಿ ಶೇಕಡಾ 38ರಷ್ಟು ಇರುತ್ತದೆ.

ಅಂಡಾಣುಗಳ ಅಂಶವಷ್ಟೇ ಅಲ್ಲದೇ, ಗರ್ಭದ ಅಂಶಗಳೂ ಕೂಡ ವಯಸ್ಸಾದ ಮಹಿಳೆಯರಲ್ಲಿನ ಬಂಜೆತನದಲ್ಲಿ ಮುಖ್ಯ ಪಾತ್ರವನ್ನು ವಹಿಸುತ್ತವೆ. ಅಂಡಾಣುಗಳನ್ನು ಕಿರಿ ವಯಸ್ಸಿನ ಮಹಿಳೆಯರಿಂದ ಪಡೆದು ವಿಭಿನ್ನ ವಯೋಮಾನದ ಮಹಿಳೆಯರ ಗರ್ಭಾಶಯಕ್ಕೆ ದಾನ ಮಾಡಿದಾಗ ಫಲಿತಾಂಶ ವಿಭಿನ್ನವಾಗಿಯೇ ಇರುತ್ತದೆ. ಉದಾ: 40 ಅಥವಾ ಅದಕ್ಕಿಂತ ಹೆಚ್ಚಿನ ವಯೋಮಾನದ ಮಹಿಳೆಯರಲ್ಲಿ ಶೇಕಡಾ 10ರಷ್ಟು ಗರ್ಭ ಕಟ್ಟುವವಿಕೆ ಯಶಸ್ವಿಯಾದರೆ, 35ಕ್ಕಿಂತ ಸಣ್ಣ ವಯಸ್ಸಿನ ಮಹಿಳೆಯರಲ್ಲಿ ಇದರ ಯಶಸ್ಸಿನ ಪ್ರಮಾಣ ಶೇಕಡಾ 23ರಷ್ಟು.

ಇನ್ನೊಂದು ಅಧ್ಯಯನದ ಪ್ರಕಾರ ಅಂಡಾಣುವನ್ನು ದಾನವಾಗಿ ಪಡೆದ 40ಕ್ಕಿಂತ ಸಣ್ಣ ವಯಸ್ಸಿನ ಮಹಿಳೆಯರು ಗರ್ಭ ಧರಿಸುವ ಪ್ರಮಾಣ ಶೇಕಡಾ 43ರಷ್ಟಾದರೆ, 40ಕ್ಕಿಂತ ಹೆಚ್ಚಿನ ವಯಸ್ಸಿನವರಲ್ಲಿ ಇದರ ಪ್ರಮಾಣ ಶೇಕಡಾ 8ರಷ್ಟು ಮಾತ್ರ. ವಯಸ್ಸಾದ ಮಹಿಳೆಯರ ಗರ್ಭಾಶಯವು ಕಡಿಮೆ ಕ್ಷಮತೆ ಹೊಂದಿರುವುದೇ ಇದಕ್ಕೆ ಕಾರಣ.

ಮಹಿಳೆಯರಲ್ಲಿ ಪ್ರತಿ ತಿಂಗಳು ಬಿಡುಗಡೆಯಾಗುವ ಅಂಡಾಣುಗಳಲ್ಲಿ ಸುಮಾರು 1000ದಷ್ಟು ನಷ್ಟವಾಗುತ್ತವೆ. ಈ ಮಾನದಂಡದಲ್ಲಿ ನೋಡಿದರೆ ಮಹಿಳೆ 38–40 ವಯಸ್ಸಿಗೆ ಬರುವ ವೇಳೆಗಾಗಲೇ ಅಂಡಾಣುಗಳ ಪ್ರಮಾಣ ಕಡಿಮೆಯಾಗುವುದು ಕೂಡ ಗರ್ಭಧಾರಣೆಯಲ್ಲಿ ಅಡ್ಡಿಯಾಗುವ ಅಂಶ. ಈ ವಯಸ್ಸಿನಲ್ಲಿಯೂ ಮಹಿಳೆ ಋತುಮತಿಯಾಗುತ್ತಾಳೆ. ಆದರೆ ಗರ್ಭಧಾರಣೆ ಸಾಮರ್ಥ್ಯ ಕಡಿಮೆಯಾಗಿರುತ್ತದೆ ಎಂಬುದು ಅತಿ ಮುಖ್ಯವಾದ ಅಂಶ.



ಡಾ|| ದೇವಿಕಾ ಗುಣಶೀಲ
**Infertility Specialist**

ರೂಢಿಗತವಾಗಿ ಹೇಳುವುದಾದರೆ, ಮಹಿಳೆ ಮೊದಲ ಬಾರಿ ಗರ್ಭ ಧರಿಸುವಾಗ 30 ವರ್ಷಕ್ಕಿಂತ ಹೆಚ್ಚು ವಯಸ್ಸಾಗಿರಬಾರದು. ಆದರೆ ಈಗಿನ ಮಹಿಳೆಯರು ಮಹತ್ವಾಕಾಂಕ್ಷಿಗಳಾಗಿದ್ದಾರೆ. ವೃತ್ತಿಪರರಾಗುತ್ತಿದ್ದಾರೆ. ಮಗುವನ್ನು ಹೆರುವುದು ಮತ್ತು ಅದನ್ನು ನೋಡಿಕೊಳ್ಳುವುದು ದೊಡ್ಡ ಭಾರ ಎನ್ನುವ ಬಾವನೆ0ಯನ್ನು ಬೆಳೆಸಿಕೊಂಡಿದ್ದಾರೆ. ಮಗುವನ್ನು ನೋಡಿಕೊಳ್ಳುವುದೆಂದರೆ ತಮ್ಮ ವೃತ್ತಿ ಜೀವನಕ್ಕೆ ತೊಂದರೆ ಹಾಗೂ ಆದಾಯಕ್ಕೂ ತೊಂದರೆ ಎನ್ನುವ ಭಾವನೆ ಹೆಚ್ಚುತ್ತಿದೆ. ವೃತ್ತಿಪರ ಮಹಿಳೆಯರು ತಮ್ಮ ಕುಟುಂಬದ ವಿಸ್ತರಣೆ ತಡವಾಗಲಿ ಎಂದು ಬಯಸಿದರೆ ಅಂಥವರು ತಮ್ಮ ದೇಹಾರೋಗ್ಯವನ್ನು (ಫಲವತ್ತತೆಯನ್ನು) ಸರಿಯಾಗಿ ಕಾಪಾಡಿಕೊಳ್ಳಬೇಕಾಗುತ್ತದೆ. ಯಾವುದೇ ಕಾರಣಕ್ಕೂ ಬೊಜ್ಜು ಬೆಳೆಸಿಕೊಳ್ಳಬಾರದು. ಏಕೆಂದರೆ ಬೊಜ್ಜು ಫಲವತ್ತತೆಯ ವೈರಿ. ಬೊಜ್ಜು ಇರುವ ಮಹಿಳೆಯರಲ್ಲಿ ಇನ್ಸುಲಿನ್ ಪ್ರಮಾಣ ಹೆಚ್ಚಿ ಅದು ತಡವಾಗಿ ಗರ್ಭಧಾರಣೆ ಮಾಡಲು ಇಚ್ಛಿಸುವವರಿಗೆ ಅಡ್ಡಿ ಉಂಟುಮಾಡಬಲ್ಲದು. ಧೂಮಪಾನ ಕೂಡ ಮಾರಕ. ಹಾಗೆಯೇ ಅತಿಯಾದ ಮದ್ಯ ಸೇವನೆಯೂ ಋತುಚಕ್ರದ ಮೇಲೆ ಅಡ್ಡ ಪರಿಣಾಮ ಬೀರುತ್ತದೆ. ಅತಿಯಾದ ಕಾಫಿ ಸೇವನೆಯೂ ಕೂಡ ತೊಂದರೆದಾಯಕ. ಇದೂ ಮಹಿಳೆಯರ ಫಲವತ್ತತೆಯ ಮೇಲೆ ದುಷ್ಪರಿಣಾಮ ಬೀರುತ್ತದೆ. ಜೊತೆಗೇ ಪದೇ ಪದೇ ಗರ್ಭಪಾತ ಆದರೆ ಅಥವಾ ಮಾಡಿಸಿಕೊಂಡರೂ ಮುಂದೆ ಹುಟ್ಟುವ ಮಗುವಿಗೆ ತೊಂದರೆಯಾಗುತ್ತದೆ. ಅನೇಕ ಬಾರಿ ವೃತ್ತಿಪರ ಕಾರಣಗಳಿಗೆ ಮದುವೆಯನ್ನು ಮುಂದೂಡಿದರೆ ಅದು ವಿವಾಹೇತರ ಸಂಬಂಧಗಳಲ್ಲಿ ಅಂತ್ಯವಾಗುವ ಸಾಧ್ಯತೆಗಳಿರುತ್ತವೆ. ಇದು ಅನೇಕ ದೈಹಿಕ ಸಮಸ್ಯೆಗಳಿಗೆ ದಾರಿ ಮಾಡಿಕೊಡುತ್ತದೆ. ಇವೆಲ್ಲ ಕಾರಣಗಳಿಗೆ ಗರ್ಭಧಾರಣೆ ಸಮಸ್ಯೆ ಎದುರಾಗಬಹುದು.

ವಯಸ್ಸಾದಂತೆ ಗರ್ಭಧರಿಸಲು ಅಥವಾ ತಂದೆಯಾಗಲು ಬೇಕಾದ ಫಲವತ್ತತೆ ಕಡಿಮೆಯಾಗುತ್ತದೆ ಎಂಬುದು ಸತ್ಯ. 35 ವರ್ಷಕ್ಕಿಂತ ತಡವಾಗಿ ಮದುವೆಯಾಗುವ ಮಹಿಳೆಯರು ಕುಟುಂಬ ಯೋಜನೆಯ ಯಾವುದೇ ಕ್ರಮವನ್ನು ಅನುಸರಿಸದೇ ಇರುವುದು ಒಳ್ಳೆಯದು. ಇಂತಹ ಮಹಿಳೆಯರು ಮದುವೆಯಾದ 6 ತಿಂಗಳಲ್ಲಿ ಗರ್ಭವತಿಯರಾಗದೇ ಇದ್ದರೆ ಕೂಡಲೇ ತಜ್ಞರನ್ನು ಸಂಪರ್ಕಿಸಬೇಕು. ಇಂತಹ ಸನ್ನಿವೇಶದಲ್ಲಿ ಚಿಕಿತ್ಸೆ ಬೇಕಾಗಬಹುದು. ಈ ಸನ್ನಿವೇಶಗಳಲ್ಲಿ ಅಂಡಾಣು ವೃದ್ಧಿಗೆ ಸೂಕ್ತ ಚಿಕಿತ್ಸೆ ಹಾಗೂ ಅಗತ್ಯ ಬಿದ್ದರೆ ಕೃತಕ ಗರ್ಭಧಾರಣೆಯನ್ನೂ ಮಾಡುವ ಸಂದರ್ಭ ಬರಬಹುದು.

**ಹೆಚ್ಚಿನ ಮಾಹಿತಿ ಮತ್ತು ಸೂಕ್ತ ಸಲಹೆಗಳಿಗೆ ಸಂಪರ್ಕಿಸಿ:**

GUNASHEELA
Fertility Centre

**ಗುಣಶೀಲ ಫರ್ಟಿಲಿಟಿ ಸೆಂಟರ್**

**ಬಸವನಗುಡಿ, ಬೆಂಗಳೂರು,**

**ಫೋ: (080) 41312600/ 266735858**

**ಶಾಖೆ: ಕೋರಮಂಗಲ: ಫೋ: (080) 41712600**